ಡಾ॥ ಜಿ. ಪರಮೇಶ್ವರ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಹಾಗೆ, ಇನ್ನು 15 ದಿವಸದೊಳಗೆ ಆ ರಿಪೋರ್ಟ್ ಬರುತ್ತದೆ. ಒಂದು ಸಪ್ಲೋರ್ಟ್ ಪ್ರೈಸ್ ನಾವೇನಾದರೂ ಮಾಡುವುದಾದರೆ, ಎಷ್ಟು ಹಣ ಸರ್ಕಾರದಿಂದ ಬರಬೇಕಾಗುತ್ತದೆ ಎನ್ನುವುದನ್ನೂ ಕೂಡ ನಿಗದಿಪಡಿಸಬೇಕಾಗುತ್ತದೆ. ಈ ದಿಸೆಯಲ್ಲಿ ಕಮಿಟಿ ರಿಪೋರ್ಟ್ ಬಂದನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದೆಂದರೆ, ಕೇಂದ್ರ ಸರ್ಕಾರದವರು, ಇಷ್ಟು ಮಾಡಿದ್ದಾರೆ, ಇದು ಸಮಾಧಾನ ತರುತ್ತದೆ ಎನ್ನುವ ವಿಚಾರ ಅಲ್ಲ. ಏಕೆಂದರೆ, ಇಷ್ಟು ಮಾಡಿದರೂ ಸಹ, ಇನ್ನೂ ಮಾರ್ಕೆಟ್‌ನಲ್ಲಿ ಬೆಲೆ ನಿಯಂತ್ರಣ ಆಗಲಿಲ್ಲ. ಆ ಉದ್ದೇಶದಿಂದಲೇ ಈ ಕಮಿಟಿಯನ್ನು ಮಾಡಿದ್ದೇವೆ, ಅವರಿಂದ ರಿಪೋರ್ಟ್ ಬಂದನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಕೆ.ಎಸ್.ಐ.ಸಿ.ಯನ್ನು ಮುಚ್ಚುವ ಬಗ್ಗೆ

653 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮವು ಕಳೆದ ನಾಲ್ಕು ವರ್ಷಗಳಿಂದ ಅನುಭವಿಸಿದ ನಷ್ಟ ಎಷ್ಟು? (ವರ್ಷವಾರು ವಿವರಗಳನ್ನು ನೀಡುವುದು)

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಇದರ ನಿವಾರಣೆಗೆ ತೆಗೆದುಕೊಂಡ ಕ್ರಮಗಳೇನು?

ಇ) ನಿಗಮವು ಹಲವಾರು ವರ್ಷಗಳಿಂದ ಸತತವಾಗಿ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿರುವುದಿಂದ ಕೆ.ಎಸ್.ಐ.ಸಿ. ಯನ್ನು ಮುಚ್ಚಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಒಂದು ವೇಳೆ ಮುಚ್ಚದಿದ್ದಲ್ಲಿ ಕೆ.ಎಸ್.ಐ.ಸಿ.ಯನ್ನು ಲಾಭಗಳಿಯವರಿಗೆ ಮಾರಾಟ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ॥ ಜಿ. ಪರಮೇಶ್ವರ್ (ರೇಷ್ಮೆ ರಾಜ್ಯ ಸಚಿವರು) :

ಅ) ಕಳೆದ ನಾಲ್ಕು ವರ್ಷಗಳಲ್ಲಿ ಕೆ.ಎಸ್.ಐ.ಸಿ. ಅನುಭವಿಸಿದ ನಷ್ಟದ ವಿವರ ಈ ಕೆಳಗೆ ನಮೂದಿಸಲಾಗಿದೆ.

(ರೂ. ಲಕ್ಷಗಳಲ್ಲಿ)

1989-90	1990-91	1991-92	1992-93
ರೂ.	ರೂ.	ರೂ.	ರೂ
466.64	347.25	43.03	56.94 (ತಾತ್ಕಾಲಿಕ)

ಆ) 1.ಸಾಲದ ಮೇಲಿನ ಪ್ರತಿ ವರ್ಷದ ಅಧಿಕ ಬಡ್ಡಿಯ ಹೊರೆ

1989-90	1990-91	1991-92	1992-93
ರೂ.	ರೂ.	ರೂ.	ರೂ
341.39	330.05	232.48	242.63

2. ಪ್ರತಿ ವರ್ಷದ ಅಧಿಕ ಅಪಮೂಲಿನ್ಯ (ಡಿಪ್ರಿಷಿಯೇಷನ್)

1989-90	1990-91	1991-92	1992-93
ರೂ.	ರೂ.	ರೂ.	ರೂ
221.42	222.87	218.61	221.20

ಸಂಸ್ಥೆಯು ರೋಗಗ್ರಸ್ಥವಾಗಿದ್ದುದರಿಂದ ಅದನ್ನು ಪುನಶ್ಚೇತನಗೊಳಿಸುವ ಸಲುವಾಗಿ ಐ.ಡಿ.ಬಿ.ಐ. (ಲೀಡ್ ಬ್ಯಾಂಕನ್ನು ಕೋರಲಾಗಿತ್ತು). ಪ್ರತಿಯಾಗಿ ಐ.ಡಿ.ಬಿ.ಐ.ನವರು

1-4-1985ರಿಂದ 31-3-92ರ ವರೆಗಿನ ಬಡ್ಡಿ ದರದ ಮೇಲೆ ರಿಯಾಯಿತಿಯನ್ನು ನೀಡಿ ಮೂಲಧನ ಹಾಗೂ ಅದರ ಮೇಲಿನ ಬಡ್ಡಿಯನ್ನು ಹಿಂತಿರುಗಿ ಪಾವತಿಸಲು 2000 ಇಸವಿಯವರೆಗೆ ಅವಕಾಶವನ್ನು ಕಲ್ಪಿಸಿರುತ್ತಾರೆ.

ಇ) ಸಂಸ್ಥೆಯು ಉತ್ಪಾದನೆ ಮತ್ತು ಮಾರಾಟ ಘಟಕಗಳಲ್ಲಿನ ಉತ್ಪಾದನೆಯ ಹೆಚ್ಚಳ ಹಾಗೂ ಮಾರಾಟದಲ್ಲಿ ದಕ್ಷತೆಯನ್ನು ಹೆಚ್ಚಿಸುವಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ಪರಿಣಾಮವಾಗಿ ಉತ್ಪಾದನೆ ಹಾಗೂ ಮಾರಾಟ ಗಣನೀಯವಾಗಿ ಹೆಚ್ಚುತ್ತಿದೆ. ಪರಿಣಾಮವಾಗಿ 1991-92 ಹಾಗೂ 1992-93ನೇ ವರ್ಷಗಳಲ್ಲಿ ನಷ್ಟದ ಪ್ರಮಾಣ ತಗ್ಗಿರುತ್ತದೆ. ಸಂಸ್ಥೆಯು ಕ್ರಮೇಣದಲ್ಲಿ ನಷ್ಟವನ್ನು ತಪ್ಪಿಸುವ ವಿಶ್ವಾಸವನ್ನು ಇರಿಸಿಕೊಂಡಿರುತ್ತದೆ. ಆದುದರಿಂದ ಸಂಸ್ಥೆಯನ್ನು ಮುಚ್ಚುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ) ಸಂಸ್ಥೆಯು ದಕ್ಷತೆಯನ್ನು ಹೆಚ್ಚಿಸಿಕೊಂಡು ನಷ್ಟವನ್ನು ಗಣನೀಯವಾಗಿ ಇಳಿಮುಖಗೊಳಿಸುತ್ತಾ ಲಾಭದತ್ತ ಹೆಜ್ಜೆಯಿಡುತ್ತಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಖಾಸಗೀಕರಣಗೊಳಿಸುವ ವಿಷಯ ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಕೆ.ಎಸ್.ಐ.ಸಿ. ಸಂಸ್ಥೆ ಬಹಳ ಲುಕ್ಸಾನ್ನಲ್ಲಿ ನಡೆಯುತ್ತಾ ಇದೆ, ಇದನ್ನು ಮುಚ್ಚುತ್ತೀರೋ ಹೇಗೆ ಎಂದು ಕೇಳಿದಾಗ, 1989-90ರಲ್ಲಿ 347 ಲಕ್ಷ ಲುಕ್ಸಾನಾಗಿದೆ. 1991-92ರಲ್ಲಿ 43 ಲಕ್ಷ ಲುಕ್ಸಾನಾಗಿದೆ. ಎಂದು ಹೇಳಿದ್ದೀರಿ. ಆಮೇಲೆ, 1992-93ರಲ್ಲಿ ತಾತ್ಕಾಲಿಕ 56 ಲಕ್ಷ ಎಂದು ಹೇಳುತ್ತೀರಿ. ತಾತ್ಕಾಲಿಕ ಎಂದರೆ, ಒಂದು ತಿಂಗಳೋ, ಎರಡು ತಿಂಗಳೋ, ಎಷ್ಟು ದಿವಸ ಎಂದು ಗೊತ್ತಾಗಲಿಲ್ಲ. ಆಮೇಲೆ ಏಕೆ ಲುಕ್ಸಾನಾಗಿದೆ ಎಂದು ಕೇಳಿದಾಗ, ಬಡ್ಡಿಯಿಂದ ಲುಕ್ಸಾನಾಗಿದೆ ಎಂದು ಹೇಳುತ್ತೀರಿ. ಆ ಬಡ್ಡಿಯು, 1989-90ರಲ್ಲಿ 341.39 ಲಕ್ಷ ರೂ.ಗಳು. ಈ ಲುಕ್ಸಾನ್ ನೋಡಿದರೆ, ಈ ಸಂಸ್ಥೆಯ ಗತಿ ಏನಾಗಬಹುದು ಎಂಬುದನ್ನು ಯೋಚನೆ ಮಾಡಬೇಕು. ಮತ್ತೆ ಇಲ್ಲಿ ಹೇಳುತ್ತಾರೆ, ಈ ಸಂಸ್ಥೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ ಐ.ಡಿ.ಬಿ.ಐ. ಲೀಡ್ ಬ್ಯಾಂಕನ್ನು ಕೋಡಲಾಗಿತ್ತು, ಪ್ರತಿಯಾಗಿ ಐ.ಡಿ.ಬಿ.ಐ.ನವರು 1-4-85ರಿಂದ 31-3-92ರ ವರೆಗಿನ ಬಡ್ಡಿ ದರದ ಮೇಲೆ ರಿಯಾಯಿತಿಯನ್ನು ನೀಡಿ ಮೂಲಧನ ಹಾಗೂ ಅದರ ಮೇಲಿನ ಬಡ್ಡಿಯನ್ನು ಹಿಂತಿರುಗಿ ಪಾವತಿಸಲು 2,000 ಇಸವಿಯವರೆಗೆ ಅವಕಾಶವನ್ನು ಕಲ್ಪಿಸಿರುತ್ತಾರೆ ಎಂದು ಹೇಳಿದ್ದೀರಿ. ಆದರೆ, ರಿಯಾಯಿತಿ ಬಡ್ಡಿ ಎಷ್ಟು ಎಂದು ಹೇಳಲಿಲ್ಲ. ಎಷ್ಟು ರಿಯಾಯಿತಿ ಬಡ್ಡಿ ಕೊಟ್ಟರು ಎಂಬುದನ್ನು ಹೇಳಬೇಕು. ಆಮೇಲೆ ಇಷ್ಟೊಂದು ಲುಕ್ಸಾನಾದರೂ ಕೂಡ, ಸೀರೆ, ಷರ್ಟುಗಳ ಬಿಡುಗಡೆ ಮಾಡಿದ್ದೀರಿ, ಎಷ್ಟು ಸೀರೆ, ಷರ್ಟ್ಗಳನ್ನು ಬಿಡುಗಡೆ ಮಾಡಿದ್ದೀರಿ? ಆಮೇಲೆ, ಅದರ ಬೆಲೆಗಳೇನು? ಆಮೇಲೆ ಹೊಸದಾಗಿ ಎಷ್ಟು ಷೋ ರೂಮುಗಳನ್ನು ತೆರೆದಿದ್ದೀರಿ? ಆ ಷೋ ರೂಮುಗಳಲ್ಲಿ, ಯಾವ ಯಾವುವು ಲಾಭದಾಯಕ ಇವೆ, ಯಾವ ಯಾವುವು ನಷ್ಟದಲ್ಲಿ ನಡೆಯುತ್ತಿವೆ, ಇದನ್ನೂ ಕೂಡ ತಾವು ಹೇಳಬೇಕಾಗುತ್ತದೆ. ಹಾಗೂ ಅಲ್ಲಿ ಕೆಲಸ ಮಾಡತಕ್ಕ ನೌಕರರೆಷ್ಟು, ಅಧಿಕಾರಿಗಳೆಷ್ಟು ಅವರ ಸಂಬಳ ಸಾರಿಗೆಗಳೆಷ್ಟು, ಫೋನ್ ಭತ್ಯೆ ಎಷ್ಟು ಇವೆಲ್ಲದರ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟರೆ ಯಾವುದರ ಪರಿಣಾಮ ಲುಕ್ಸಾನಾಗುತ್ತಿದೆ, ಬರೀ ಬಡ್ಡಿಯಿಂದ ಲುಕ್ಸಾನಾಗುತ್ತಿದೆಯೋ ಅಥವಾ ವ್ಯವಹಾರ ಸರಿಯಾಗಿ ಆಗದೇ, ಇರುವುದಕ್ಕಾಗಿ ಲುಕ್ಸಾನಾಗುತ್ತಿದೆಯೋ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬಹುದು.

ಡಾ|| ಜಿ. ಪರಮೇಶ್ವರ್ : ಈ ಕೆ.ಎಸ್.ಐ.ಸಿ. ವಿಚಾರವಾಗಿ ಪದೇಪದೇ ಈ ಸದನದಲ್ಲಿ ಪ್ರಶ್ನೆಗಳು ಬರುತ್ತಲೇ ಇವೆ. ಕಳೆದ ಸಾರಿ ಕೂಡ ಇದರ ಬಗ್ಗೆ ಪ್ರಶ್ನೆ

ಬಂದು, ಲುಕ್ಸಾನು ಆಗುತ್ತಿದೆ ಎನ್ನತಕ್ಕ ವಿಷಯ ಬಂದಿತ್ತು. ಇವತ್ತಿನ ದಿವಸ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. 1980ರಲ್ಲಿ ಈ ಸಂಸ್ಥೆಗೆ ಸುಮಾರು 27ಕೋಟಿ ರೂಪಾಯಿ ಸಾಲವನ್ನು ತೆಗೆದುಕೊಂಡರು. ಐ.ಡಿ.ಬಿ.ಐ ಮತ್ತು ಐ.ಸಿ.ಐ.ಸಿ.ಐ ಹಾಗೂ ವಿಶ್ವಬ್ಯಾಂಕ್ ನೆರವನ್ನೂ ಕೂಡ ತೆಗೆದುಕೊಂಡಿದ್ದರು. ಕೆಲವು ಘಟಕಗಳು ಹೊಸದಾಗಿ ಮ್ಯಾಡ್ರನೈಸ್ ಆಗಿವೆ. ಟಿ.ನರಸೀಪುರ ಫ್ಯಾಕ್ಟರಿ, ಕನಕಪುರ ಫ್ಯಾಕ್ಟರಿ, ಚನ್ನಪಟ್ಟಣ ಫ್ಯಾಕ್ಟರಿ ಮತ್ತು ಮೈಸೂರಿನ ವೀವಿಂಗ್ ಫ್ಯಾಕ್ಟರಿ ಈ 4 ಘಟಕಗಳನ್ನು ಮಾಡ್ರನೈಸ್ ಮಾಡಬೇಕೆಂದು ಮಾಡಿದ್ದೇವೆ. ಈ ದೃಷ್ಟಿಯಿಂದ ಏನಾಗಿದೆಯೆಂದರೆ, ಇವತ್ತಿನದಿವಸ 27 ಕೋಟಿ ನಾವೇನು ಸಾಲ ತೆಗೆದುಕೊಂಡಿದ್ದೆವು, ಅದಕ್ಕೆ ಬಡ್ಡಿ ಹಾಕಿಕೊಂಡು ಬಂದಿದ್ದಾರೆ. ನೀವು 4 ವರ್ಷದ್ದು ಮಾತ್ರ ಕೇಳಿದ್ದೀರಿ, 4 ವರ್ಷದ ಮಾಹಿತಿ ಕೊಟ್ಟಿದ್ದೇವೆ. ನಮಗೆ ನಷ್ಟಬಂದಿರುವುದು ಎಲ್ಲಿ ಎಂದರೆ, ಈ ಸಾಲಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ. ಸುಮಾರು ನಾನು ಕೊಟ್ಟಿರತಕ್ಕ ವಿವರಗಳ ರೀತಿಯಲ್ಲಿ 1989-90ರಿಂದ 341 ಲಕ್ಷ ಬಡ್ಡಿಯನ್ನು ಕಟ್ಟುತ್ತಿದ್ದೇವೆ. ಇದರ ಜೊತೆಗೆ, ಅಕೌಂಟ್ ಲೆಕ್ಕಾಚಾರದಲ್ಲಿ ಡಿಪ್ರೀಸಿಯೇಷನ್ ಹಾಕಲೇಬೇಕಾಗುತ್ತದೆ. ಅದು 221 ಲಕ್ಷ. It is not a cash loss. It is only a depreciation which we will have to take into account.

ಈ ದೃಷ್ಟಿಯಲ್ಲಿ ಏನಾಗಿದೆ ಎಂದು ಹೇಳಿದರೆ, 1991-92ಕ್ಕೆ ನಾವು ಲಾಭಕ್ಕೆ ಬಂದಿದ್ದೇವೆ, ಏಕೆಂದರೆ, ಸುಮಾರು ಡಿಪ್ರೀಸಿಯೇಷನ್ ತೆಗೆದರೆ, 1991-92ರಲ್ಲಿ, 175 ಲಕ್ಷ ಲಾಭಕ್ಕೆ ಬಂದಿದ್ದೇವೆ. 1992-93ಕ್ಕೆ ಈಗಾಗಲೇ 164 ಲಕ್ಷ ಲಾಭಕ್ಕೆ ಬಂದಿದ್ದೇವೆ.

10.10 ಎಎಂ

ಅಂಕಿ ಅಂಶಗಳ ಪ್ರಕಾರ 89-90 ಮತ್ತು 90-91ಕ್ಕೆ ಕಂಪೇರ್ ಮಾಡಿ ನೋಡಿದರೆ, 91-92 ಮತ್ತು 92-93ರಲ್ಲಿ ನಮ್ಮ ಲಾಸ್ ಕಡಿಮೆಯಾಗಿದೆ. ನಮಗೇನೂ ಕ್ಯಾಷ್ ಲಾಸ್ ಇಲ್ಲ. ನಾವು ಇನ್ನೂ 175 ಲಕ್ಷ ರೂಪಾಯಿ ಲಾಭದಲ್ಲೇ ಇದ್ದೇವೆ. ಆ ದೃಷ್ಟಿಯಿಂದ ಪುನಶ್ಚೇತನ ಮಾಡುವುದಕ್ಕೆ ಕೂಡಾ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ತಾವು ರೇಷ್ಮೆ ಸೀರೆ ಮತ್ತು ಶರ್ಟ್‌ಗಳ ಬಗ್ಗೆ ಕೇಳಿದ್ದೀರಿ. ಅದರ ಬಗ್ಗೆ ಇಷ್ಟೇ ಸೀರೆ ಮತ್ತು ಶರ್ಟ್‌ಗಳನ್ನು ಮಾರಿದ್ದೇವೆಂದು ತಕ್ಷಣ ಅಂಕಿ ಅಂಶಗಳನ್ನು ಕೊಡುವುದಕ್ಕಾಗುವುದಿಲ್ಲ. ತಾವು ಪ್ರತ್ಯೇಕವಾಗಿ ಪ್ರಶ್ನೆಗಳನ್ನು ಕೇಳಬಹುದು. ನಾನು ಒಂದು ಉದಾಹರಣೆ ಹೇಳುತ್ತೇನೆ, ಮಾಡರ್ನೈಸೇಷನ್ ಆದ ಮೇಲೆ ಮೈಸೂರಿನಲ್ಲಿ 80 ಸಾವಿರ ಮೀಟರ್ ಬಟ್ಟೆ ತಯಾರು ಮಾಡುವುದಕ್ಕೆ ಮಾತ್ರ ಅವಕಾಶ ಇದೆ. ಮೈಸೂರು ಸಿಲ್ಕ್ ಫ್ಯಾಕ್ಟರಿಯ ಇತಿಹಾಸದಲ್ಲೇ ಮಾಡದೇ ಇದ್ದಷ್ಟು ಅಂದರೆ 76 ಸಾವಿರ ಮೀಟರನ್ನು ಬಟ್ಟೆಯನ್ನು ಕಳೆದ ಜುಲೈ ತಿಂಗಳಲ್ಲಿ ತಯಾರು ಮಾಡಿದ್ದಾರೆ. ಚನ್ನಪಟ್ಟಣದಲ್ಲಿ ಯಾವಾಗಲೂ 7-8 ಮೆಟ್ರಿಕ್ ಟನ್ ಅಷ್ಟು ರೇಷ್ಮೆ ಉತ್ಪಾದನೆ ಮಾಡುತ್ತಿದ್ದು ಈ ವರ್ಷ 12 ಮೆಟ್ರಿಕ್ ಟನ್ ಅಷ್ಟು ಉತ್ಪಾದನೆ ಮಾಡಿದ್ದಾರೆ. ಆ ದೃಷ್ಟಿಯಿಂದ ಲಾಸನ್ನು ಕಡಿಮೆ ಮಾಡುತ್ತಾ ಹೋಗಿ ಲಾಭಕ್ಕೆ ಬರುತ್ತೇವೆ ಎನ್ನುವ ಉದ್ದೇಶ ನಮಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಎಷ್ಟು ಸೀರೆ ಮತ್ತು ಶರ್ಟ್‌ಗಳನ್ನು ಮಾರಿದ್ದೀರಾ ಎಂದು ಕೇಳಿದ್ದಕ್ಕೆ ಅಂಕಿ ಅಂಶ ಹೇಳುವುದಕ್ಕಾಗುದಿಲ್ಲವೆಂದು ಹೇಳಿದರು. ಆ ಸೀರೆಗಳು ಮತ್ತು ಶರ್ಟ್‌ಗಳನ್ನು ಮಾರ್ಕೆಟ್ಟಿಗೆ ತಂದ ಮೇಲೆ ನಿಮಗೆ ಅದರಿಂದ ಲಾಭವಾಗಿದೆಯೋ? ಆಮೇಲೆ ನಿಮ್ಮ ಷೋರೂಂಗಳಿಂದ ಲಾಭವಾಗುತ್ತಿದೆಯೋ ಇಲ್ಲವೋ ಎಂದು ಹೇಳಬಹುದಲ್ಲಾ? ಮತ್ತು ಆ ಸೀರೆ ಮತ್ತು ಆ ಶರ್ಟ್ ಬೆಲೆ ಎಷ್ಟು?

ಡಾ॥ ಜಿ. ಪರಮೇಶ್ವರ : ಸನ್ಮಾನ್ಯ ಅಧ್ಯಕ್ಷರೆ, ಈ ಸೀರೆಗಳನ್ನು ತಯಾರು ಮಾಡುವ ಉದ್ದೇಶವನ್ನು ಈ ಹಿಂದೆ ಸದನದಲ್ಲಿ ಹೇಳಿದ್ದೇನೆ. ಇವತ್ತು ಕೆ.ಎಸ್.ಐ.ಸಿ. ಸೀರೆಗಳು ಎಂದರೆ 5-6 ಸಾವಿರ ರೂಪಾಯಿಗಳಾಗುತ್ತದೆ. ಇದರಿಂದ ಬಡವರಿಗೆ ಸೀರೆ ಸಿಗುವುದಿಲ್ಲವೆಂದು ಆರು ನೂರು ಎಂಟು ನೂರು ರೂಪಾಯಿಗಳಲ್ಲಿ ಸೀರೆ ಸಿಗಬೇಕು ಎನ್ನುವ ಉದ್ದೇಶದಿಂದ ತಯಾರು ಮಾಡಿದ್ದೇವೆ. ನಮ್ಮ ಷೋ ರೂಂಗಳಲ್ಲಿ ಆರು ನೂರು 8 ನೂರು ರೂಪಾಯಿಗಳಿಗೆ ಸೀರೆ ಸಿಗುತ್ತವೆ. ಇವುಗಳಿಗೆ ಸೌಮ್ಯ ಎಂದು ನಾವು ಹೆಸರಿಟ್ಟಿದ್ದೇವೆ. ಆಮೇಲೆ ಮಾರ್ಕೆಟ್ನಲ್ಲಿ ಶರ್ಟ್ಗೆ ಬೆಲೆ ಇಟ್ಟು ಏನು ಮಾಡುತ್ತಾರೆ? ಅದಕ್ಕಿಂಥ ಕಡಿಮೆ ಅಂದರೆ ಆರು ನೂರು ಎಂಟು ನೂರು ರೂಪಾಯಿಗಳ ಬೆಲೆ ಇಟ್ಟು ಮಾರುತ್ತಿದ್ದೇವೆ. ಬೇರೆ ಕಂಪನಿಯವರು 1200 ರೂಪಾಯಿಗಳನ್ನು ಇಟ್ಟಿದ್ದಾರೆ. ನಾವು ಕಡಿಮೆ ಬೆಲೆ ಇಟ್ಟುಕೊಂಡು ಮಾಡುತ್ತಿದ್ದೇವೆ. ಇದು ಲಾಭದ ಉದ್ದೇಶ ಅಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 300 ರೂಪಾಯಿಗಳಿಗೆ ಶರ್ಟ್ಗಳು ಸಿಗುತ್ತವೆ.

ಡಾ॥ ಜಿ ಪರಮೇಶ್ವರ್ : 150 ರೂಪಾಯಿಗೂ ಸಿಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸೌಮ್ಯ ಎಂದರೆ ಏನು?

ಡಾ॥ ಜಿ ಪರಮೇಶ್ವರ್ : ಅದು ಒಂದು ಹೆಸರು ಇಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಉಟ್ಟ ತಕ್ಷಣ ಹರಿದು ಹೋಗುವುದು ಅಂಥ. ಸೌಮ್ಯ ಅಂದರೆ ಅದೇ ತಾನೆ?

ಡಾ॥ ಜಿ. ಪರಮೇಶ್ವರ್ : ಅದು ಅವರವರ ಕಲ್ಪನೆ ಮೇಲೆ ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಕೆ.ಎಸ್.ಐ.ಸಿ. ಘಟಕ ನನ್ನ ಕ್ಷೇತ್ರದಲ್ಲೂ ಒಂದು ಇರುವುದರಿಂದ ಮತ್ತು ನನ್ನ ಅನುಭವಕ್ಕೆ ಬಂದಿರುವ ಹಾಗೆ ಅಲ್ಲಿರತಕ್ಕಂಥ ಕಾರ್ಮಿಕರು ಬಹಳ ಒಳ್ಳೆಯವರಿದ್ದಾರೆ. ಒಳ್ಳೆ ಕೆಲಸಗಾರರಿದ್ದಾರೆ. ಕೆ.ಎಸ್.ಐ.ಸಿ.ನಲ್ಲಿ ಗೂಡನ್ನು ಕೊಂಡು ಅದನ್ನು ಶೇಖರಣೆ ಮಾಡಿಕೊಂಡು ಅದರಿಂದ ನೂಲನ್ನು ತೆಗೆದು ಅದಾದ ಮೇಲೆ ಬಟ್ಟೆ ಮಾಡಲಿಕ್ಕೆ ಬೇಕಾಗಿರತಕ್ಕಂಥ ಬಂಡವಾಳ ಈ ಫ್ಯಾಕ್ಟರಿಗಳಿಗೆ ಸಮಯಕ್ಕೆ ಸರಿಯಾಗಿ ಸಿಗತಕ್ಕಂಥಾದ್ದು ಕಷ್ಟ. ಕಳೆದ 2 ವರ್ಷಗಳಿಂದ ಕೆ.ಎಸ್.ಐ.ಸಿ. ಚೆನ್ನಾಗಿ ಕೆಲಸ ಮಾಡಿದೆ. ಏಕೆಂದರೆ ನಷ್ಟ ಕಡಿಮೆಯಾಗುತ್ತಿದೆ. ಇದು ಸಂತೋಷ. ಮತ್ತೆ ಫ್ಯಾಕ್ಟರಿಯನ್ನು ಮುಚ್ಚುವುದಿಲ್ಲವೆಂದು ಹೇಳಿದ್ದಾರೆ. ಅದನ್ನೂ ಕೂಡಾ ನಾನು ಸ್ವಾಗತ ಮಾಡುತ್ತೇನೆ. ನಾನು ಮಂತ್ರಿಗಳನ್ನು ಕೇಳುವುದೇನೆಂದರೆ, ಇವರ ದೈನಂದಿನ ವಹಿವಾಟಿಗೆ ಬೇಕಾಗಿರತಕ್ಕಂಥ ಹಣವನ್ನು ಸಕಾಲದಲ್ಲಿ ಒದಗಿಸಲಿಕ್ಕೆ ಬ್ಯಾಂಕಿನ ಮೂಲಕವೋ ಅಥವಾ ಸರ್ಕಾರದ ಮೂಲಕವೋ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ?

ಡಾ॥ ಜಿ. ಪರಮೇಶ್ವರ್ : ಈಗಾಗಲೇ ಈ ದೃಷ್ಟಿಯಲ್ಲಿ ನಾವು ಗಮನಹರಿಸಿದ್ದೇವೆ. ಏಕೆಂದರೆ ಏನು ಮೊದಲು ಲಾಸ್ ಆಗುತ್ತಿತ್ತು? ಅದನ್ನು ತಪ್ಪಿಸಿ ಲಾಭ ಮಾಡಬೇಕು ಎನ್ನುವ ದೃಷ್ಟಿಯಿಂದ 92-93ರಲ್ಲಿ ಸುಮಾರು 1ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟಿದ್ದೇವೆ. 93-94ಕ್ಕೆ ಈಗಾಗಲೇ 2ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಇನ್ನೂ ಕೂಡಾ ಹಣ ನಮಗೆ ಸಾಕಾಗುತ್ತಿಲ್ಲ. ಹೆಚ್ಚಿಗೆ ಲಾಭ ಗಳಿಸಬೇಕೆಂದರೆ ನಮ್ಮ ಇನ್ವೆಸ್ಟ್ಮೆಂಟ್ ಕೂಡಾ ಜಾಸ್ತಿಯಾಗಬೇಕಾಗುತ್ತದೆ. ಇನ್ನೂ 4ಕೋಟಿ ರೂಪಾಯಿಗಳನ್ನು ಕೊಡಿ ಎಂದು ಅವರು ಕೇಳಿದ್ದಾರೆ. ಈಗ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದ್ದೆ.

ಅಧ್ಯಕ್ಷರು : `ಶ್ರೀ ಕರಿಯಣ್ಣನವರೇ, ತಮ್ಮ ಪ್ರಶ್ನೆಯನ್ನು ವಾರ್ತಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ ಅದು ಅವರಿಗೇ ಬರುತ್ತದೆ. ಸಮಾಜ ಕಲ್ಯಾಣ ಇಲಾಖೆಯವರು ಹಣ ಕೊಡದೆ ವಾರ್ತಾ ಇಲಾಖೆಯವರು ಟಿ ವಿ ಕೊಡುವುದಕ್ಕೆ ಬರುವುದಿಲ್ಲ. ಇದನ್ನು ಸ್ಪೆಷಲ್ ಕಾಂಪೋನೆಂಟ್ನಲ್ಲಿ ಕೊಡುವುದು. ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರು ಇದರ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ, ಅದು ಅವರ ಖಾತೆಗೆ ಸೇರಿದ ವಿಷಯ. ಈಗ ಸ್ಪೆಷಲ್ ಕಾಂಪೊಸೆಂಟ್ ಪ್ರೋಗ್ರಾಮ್ನಲ್ಲಿ ಟಿವಿ ಗಳನ್ನು ಹರಿಜನ ಗಿರಿಜನ ಕೇರಿಗೆ ಕೊಟ್ಟಿತ್ತು. ಈಗ ವಾರ್ತಾ ಇಲಾಖೆಗೆ ಟ್ರಾನ್ಸ್ಫರ್ ಮಾಡಿದ್ದೀರಿ. ಅದು ಸಮಾಜ ಕಲ್ಯಾಣ ಇಲಾಖೆಗೆ ಬರುವುದು. ದುಡ್ಡು ಕೊಡುವವರು ಅವರು. ದುಡ್ಡು ಕೊಡದೆ ಅವರು ಟಿ.ವಿ. ಹೇಗೆ ಕೊಡುವುದಕ್ಕೆ ಬರುತ್ತದೆ ?

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನೇ ಇದಕ್ಕೆ ಉತ್ತರ ಕೊಡಬೇಕಾಗಿತ್ತು. ಮುಖ್ಯ ಮಂತ್ರಿಗಳು ನಾನೇ ಮಂಗಳವಾರ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅವರು ಮಂಗಳವಾರದಂದು ಉತ್ತರ ಕೊಡುತ್ತಾರೆ.

ಬೇಲೂರು ಕೈಗಾರಿಕಾ ವಲಯದ ಸಣ್ಣ ಪ್ರಮಾಣದ ಘಟಕಗಳಿಗೆ ಸಹಾಯಧನ

470 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಸಮೀಪವಿರುವ ಬೇಲೂರು ಇಂಡಸ್ಟ್ರೀಯಲ್ ಏರಿಯಾದಲ್ಲಿ ಎಷ್ಟು ಚಿಕ್ಕ ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸಲಾಗಿದೆ. (ಆ ಉದ್ಯಮಗಳ ಹೆಸರು, ಮೊತ್ತ ಉಳಿದ ಎಲ್ಲಾ ಮಾಹಿತಿಗಳನ್ನು ಕೊಡುವುದಾಗಬೇಕು);

ಆ) ಸದರಿ ಪ್ರದೇಶದಲ್ಲಿ ಸ್ಥಾಪಿಸಲಾದ ಚಿಕ್ಕ ಉದ್ಯಮದಾರರಿಗೆ ಎಷ್ಟು ಹಣ ಸಬ್ಸಿಡಿಯನ್ನು ಇಲ್ಲಿಯವರೆಗೆ ಸರ್ಕಾರದಿಂದ ಕೊಡಲಾಗಿದೆ ಮತ್ತು ಇನ್ನು ಎಷ್ಟು ಹಣ ಕೊಡಬೇಕಾಗಿದೆ (ಎಲ್ಲಾ ಉದ್ದಿಮೆದಾರರ ಹೆಸರು ಹಾಗೂ ಅವರಿಗೆ ಸಲ್ಲಿಸತಕ್ಕ ಸಂಪೂರ್ಣ ವಿವರವನ್ನು ಕೊಡುವುದು);

ಇ) ಈ ಸಣ್ಣ ಉದ್ದಿಮೆದಾರರಿಗೆ ಸಬ್ಸಿಡಿಯನ್ನು ಕೊಡುವುದರಲ್ಲಿ ಬಹಳ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ರೀತಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಜರೂರುಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಬೇಲೂರು ಕೈಗಾರಿಕಾ ವಲಯದಲ್ಲಿ ಹತ್ತು ಚಿಕ್ಕ ಉದ್ದಿಮೆಗಳು ಸ್ಥಾಪಿಸಲ್ಪಟ್ಟಿವೆ. ಅವುಗಳ ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಲಾಗಿದೆ.

ಆ) ಸಹಾಯಧನ ಮಂಜೂರಾಗಿ ಬಿಡುಗಡೆ ಮಾಡಬೇಕಾದ ವಿವರಗಳನ್ನು ಅನುಬಂಧ 'ಆ' ದಲ್ಲಿ ನೀಡಲಾಗಿದೆ.

ಇ) ಸಣ್ಣ ಕೈಗಾರಿಕೆಗಳಿಗೆ ವಿಶೇಷವಾಗಿ ವಲಯ-4ರಲ್ಲಿ (ಬೇಲೂರು ಕೈಗಾರಿಕಾ ಕ್ಷೇತ್ರ) ಸ್ಥಾಪಿಸಲ್ಪಡುವ ಕೈಗಾರಿಕೆಗಳಿಗೆ ಆದ್ಯತೆ ಮೇರೆಗೆ ಮಂಜೂರಾದ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ. ಬೇಲೂರು ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈಗಾಗಲೇ 30-4-1993ರವರೆಗೆ ಮಂಜೂರಾತಿ ಪಡೆದ ಎಲ್ಲಾ ಹಣ ಕೈಗಾರಿಕೆಗಳಿಗೆ ಈಗಾಗಲೇ ಸಹಾಯಧನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ. ಮೇ 1993ರ ನಂತರ ಮಂಜೂರಾತಿ ಪಡೆದ ಉಳಿದ 4 ಕೈಗಾರಿಕೆಗಳಿಗೆ ಸಹಾಯಧನವನ್ನು ಮುಂಬರುವ ತಿಂಗಳುಗಳಲ್ಲಿ ಹಣ ಬಿಡುಗಡೆ ಮಾಡಲಾಗುತ್ತದೆ.